ಶ್ರೀ ಎಂ.ಸಿ.ನಾಣಯ್ಯ :- ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಕೆಲವರು ಆಬ್ಜೆಕ್ಷನ್ ಅನ್ನು ಎತ್ತಿದ್ದಾರೆ. ನಾವು ಹೇಳಿರತಕ್ಕಂತಹ ಸಮಜಾಯಿಸಿಗೆ ಅದು ಅವರಿಗೆ ಸರಿಯಾಗಲಿಲ್ಲ. Sir, I request the Hon'ble Speaker to withhold the consideration of the bill. Bill has already been introduced. Consideration part of the bill may be withdrawn.

MR. SPEAKER:- Bill has already been introduced.

SRI M.C.NANAIAH:- Introduction part is there.

MR. SPEAKER:- It is a welcome gesture..... I withhold the Bill.

• ವಿಧೇಯಕವನ್ನು ಪುನರ್ ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು ಕರ್ನಾಟಕ ವಿಧಾನ ಪರಿಷತ್ತಿನಿಂದ ತಿದ್ದುಪಡಿಯಾಗಿ ಬಂದಿರುವ 1996ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಪುನರ್ ಪರ್ಯಾಲೋಚಿಸುವುದು

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ.ಸಿ.ನಾಣಯ್ಯ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)(ಗ್ರಾಮೀಣಾಭಿವೃದ್ಧಿ ಸಚಿವರ ಪರವಾಗಿ):- ಕರ್ನಾಟಕ ವಿಧಾನ ಪರಿಷತ್ತಿನಿಂದ ತಿದ್ದುಪಡಿಯಾಗಿ ಬಂದಿರುವ 1996ನೇ ಸಾಲಿನ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಪುನರ್ ಪರ್ಯಾಲೋಚಿಸಲು ಸೂಚಿಸುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎಂ.ಸಿ.ನಾಣಯ್ಯ:- ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಕರ್ನಾಟಕ ರಾಜ್ಯ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಅಂಗೀಕರವಾಗಿ ಅದು ವಿಧಾನ ಪರಿಷತ್ತಿಗೆ ಹೋದಾಗ, ವಿಧಾನ ಪರಿಷತ್ತಿನಲ್ಲಿ ವಿಧಿ 159 ಯಾವುದು ಇದೆ ಅದರ ಬಗ್ಗೆ ಒಂದು ವ್ಯಾಪಕವಾದಂತಹ ಚರ್ಚೆ ನಡೆಯಿತು. ಚರ್ಚೆಯ ನಂತರ ಮಾನ್ಯ ಮುಖ್ಯ ಮಂತ್ರಿಗಳು ಅದಕ್ಕೆ ಉತ್ತರವನ್ನು ಕೊಡುತ್ತಿರತಕ್ಕಂತಹ ಸಂದರ್ಭದಲ್ಲಿ ಅದಕ್ಕೆ ಅಂಗೀಕೃತವಾಗಿ ನಾವು ಒಂದು ತಿದ್ದುಪಡಿಯನ್ನು ತಂದು ಆ ವಿಧಿ 159 ಯಾವುದು ಇದೆ, ಅದನ್ನು ತೆಗೆದು ಹಾಕಬೇಕೆಂದು ಹೇಳುತ್ತಿರತಕ್ಕಂತಹ ತಿದ್ದುಪಡಿಯನ್ನು ಮಂಡಿಸಿ ಆದ ಮೇಲೆ ಇದನ್ನು ಸರ್ಕಾರ ಒಪ್ಪಿಕೊಂಡು ವಿಧಾನಪರಿಷತ್ ಅದನ್ನು ಅಂಗೀಕಾರ ಮಾಡಿ ಇದನ್ನು ಈಗ ವಿಧಾನ ಸಭೆಗೆ ಕಳುಹಿಸಿದ್ದಾರೆ. 159ಕ್ಕೆ ತಿದ್ದುಪಡಿಯನ್ನು ತಂದಿರುವುದನ್ನು ಈ ಸದನಕ್ಕೆ ತಿಳಿಸುತ್ತೇನೆ. ದಯವಿಟ್ಟು ಒಂದು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು. ನಮ್ಮ ಸಂವಿಧಾನದ ಅಮೆಂಡ್‌ಮೆಂಟ್‌ನ 73 ಅಮೆಂಡ್‌ಮೆಂಟ್ ಯಾವುದು ಇದೆ. 73ನೇ ವಿಧಿಯಲ್ಲಿ 243 (ಸಬ್ ಕ್ಲಾಸ್ 3 ಸಿ ಅಂಡ್ ಡಿ ಇದು ನಮ್ಮ ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ರಾಜ್ಯ ಸಭಾ ಮತ್ತು ಲೋಕಸಭಾ ಸದಸ್ಯರುಗಳು ಯಾರು ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಯಲ್ಲಿ ಸದಸ್ಯರಾಗಲು

ಅರ್ಹರು ಎಂದು ಹೇಳುತ್ತಿರತಕ್ಕಂಥದ್ದನ್ನು ಸಂವಿಧಾನದ ಅಮೆಂಡ್‌ಮೆಂಟ್‌ನಲ್ಲಿ ತಿಳಿಸಿದ್ದಾರೆ. ಆ ಸಂವಿಧಾನದ ತಿದ್ದುಪಡಿಯಲ್ಲಿ ಏನೇನು ಸೂಚಿಸಿದ್ದಾರೆ ಎಂದರೆ, ವಿಧಾನ ಸಭೆಯ ಮತ್ತು ಲೋಕ ಸಭೆಯ ಸದಸ್ಯರುಗಳು ಅವರ ವಿಧಾನ ಸಭೆಯ ಲೋಕಸಭೆಯ ವ್ಯಾಪ್ತಿ ಒಳಗಡೆ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿಯ ಒಳಗಡೆ ಪೂರ್ತಿ ಅಥವಾ ಯಾವುದಾದರೂ ಒಂದು ಭಾಗದ ಒಳಗಡೆ ಅವರು ಮತದಾರರು ಆಗಿದ್ದರೆ ಅಂತಹವರು ಆ ಜಿಲ್ಲಾಪರಿಷತ್ತಿನ ಸದಸ್ಯರು ಆಗಿರಬಹುದು ಎಂದು ಹೇಳಿರತಕ್ಕಂಥದ್ದು ಉಚಿತ. ಬಹುಶಃ ಎಲ್ಲಾ ವಿಧಾನ ಸಭೆಯ ಸದಸ್ಯರು ಅಲ್ಲಿ ಆಗಿರುತ್ತಾರೆ. ಒಂದಲ್ಲ ಒಂದು ಭಾಗದಲ್ಲಿ ಆ ಜಿಲ್ಲಾ ಪರಿಷತ್ತಿನ ಭಾಗ ಅಥವಾ ಪೂರ್ತಿ ಭಾಗ, ಆ ಭಾಗದಲ್ಲಿ ಅವರುಗಳು ಬರುತ್ತಾರೆ. ಆದರೆ ವಿಧಾನ ಪರಿಷತ್ತಿನ ಮತ್ತು ರಾಜ್ಯ ಸಭಾ ಸದಸ್ಯರಿಗೆ ಸಂಬಂಧಪಟ್ಟ ಹಾಗೆ ರಾಜ್ಯಾಂಗದ ತಿದ್ದುಪಡಿಯಲ್ಲಿ ಏನು ಹೇಳಿದ್ದಾರೆ ಎಂದರೆ, ಆದೇ 143 ಸಿ ಅಂಡ್ ಡಿ ಯಲ್ಲಿ ಆ ಮತದಾರರ ಕ್ಷೇತ್ರದಲ್ಲಿ ಮತದಾರರು ಆಗಿದ್ದರೆ ಮಾತ್ರ ಎಂದು ಹೇಳಿದ್ದಾರೆ. ಯಾರಾದರೂ ವಿಧಾನ ಪರಿಷತ್ತಿನ ಸದಸ್ಯರು ಅಥವಾ ರಾಜ್ಯ ಸಭಾ ಸದಸ್ಯರು ಎಲ್ಲಿಯಾದರೂ ಕಾರ್ಪೊರೇಷನ್‌ನಲ್ಲಿ ಅಥವಾ ಮುನಿಸಿಪಾಲಿಟಿಯ ಒಳಗಡೆ ಸದಸ್ಯರಾಗಿದ್ದು ಅವರು ಪಂಚಾಯ್ತಿ ಕ್ಷೇತ್ರದಲ್ಲಿ ಸದಸ್ಯರು ಆಗಿಲ್ಲದೇ ಹೋದರೆ ಅವರು ಜಿಲ್ಲಾ ಪಂಚಾಯ್ತಿಯಲ್ಲಿ ತಾಲ್ಲೂಕು ಪಂಚಾಯ್ತಿ ಯಲ್ಲಿ ಅವರು ಸದಸ್ಯರಾಗಲು ಅನಾರ್ಹರು ಎಂದು ಹೇಳುತ್ತಿರತಕ್ಕಂಥದ್ದನ್ನು ರಾಜ್ಯಾಂಗದಲ್ಲಿ ಸಂಪೂರ್ಣವಾಗಿ ತಿದ್ದುಪಡಿಯನ್ನು ಮಾಡಿ ಕಳುಹಿಸಿದ್ದಾರೆ. ಆದರೆ 1993ನೇ ಇಸವಿಯಲ್ಲಿ ಆವತ್ತು ಕಾಂಗ್ರೇಸ್ ಸರ್ಕಾರ ಅಧಿಕಾರದಲ್ಲಿದ್ದಾಗ ಯಾವ ತಿದ್ದುಪಡಿಯನ್ನು ತಂದರೋ ಅದರಲ್ಲಿ ಡಿಸ್ಟ್ರಿಕ್ಟ್ ಎನ್ನತಕ್ಕ ಪದ ಯಾವುದು ಇತ್ತು ಅದಕ್ಕೆ 210ರಲ್ಲಿ ರೆವಿನ್ಯೂ ಡಿಸ್ಟ್ರಿಕ್ಟ್ ಎಂದು ವ್ಯಾಖ್ಯಾನ ಮಾಡಿದರು. ಇದರ ಪರಿಣಾಮ ಏನಾಯಿತೆಂದರೆ ವಿಧಾನ ಪರಿಷತ್ತಿನ ಮತ್ತು ರಾಜ್ಯಸಭಾ ಸದಸ್ಯರು ಆ ಇಡೀ ಜಿಲ್ಲೆಯಲ್ಲಿ ಎಲ್ಲಾದರೂ ಒಂದು ಕಡೆ ಮತದಾರರಾಗಿದ್ದರೆ ನಿಮಗೆ ಅಲ್ಲಿ ಇರುವುದಕ್ಕೆ ಅಧಿಕಾರ ಇದೆ ಎನ್ನುವ ವ್ಯಾಖ್ಯಾನ ನಡೆದುಹೋಯಿತು. ಆದರೆ ಆ ತಿದ್ದುಪಡಿ ಏನಿತ್ತು ಅದು ರಾಜ್ಯಾಂಗ ತಿದ್ದುಪಡಿಗೆ ವಿರುದ್ಧವಾಗಿರತಕ್ಕದ್ದು. ಅದನ್ನುಸರಿಪಡಿಸಲು 159ನೇ ತಿದ್ದುಪಡಿಯನ್ನು ನಾವು ತಂದೆವು. ನಾವು ಇದರಲ್ಲಿ ಡಿಸ್ಟ್ರಿಕ್ಟ್ ಎನ್ನುವುದನ್ನು ಬಿಟ್ಟು ಆ ಜಿಲ್ಲಾ ಪಂಚಾಯಿತ ಮತ್ತು ತಾಲ್ಲೂಕು ಪಂಚಾಯಿತಿಯ ವ್ಯಾಪ್ತಿಯಲ್ಲಿ ಅವರು ಮತದಾರರಾಗಿದ್ದರೆ, ಎಂದು ನಾವು ಬದಲಾವಣೆ ಮಾಡಬೇಕಾಯಿತು. ಎಲ್ಲೆಲ್ಲಿ ಜಿಲ್ಲೆ ಎಂದು 159ರಲ್ಲಿ ನಾವು ಕಾಣುತ್ತಿದ್ದೇವೆ ಇದಕ್ಕೆ ಸಂಬಂಧಪಟ್ಟಂತೆ ನಾವು ತಿದ್ದುಪಡಿಯನ್ನು ತಂದಾಗ, ವಿದಾನ ಪರಿಷತ್ತಿನಲ್ಲಿ ನಾವು ಸದಸ್ಯರಾಗಿದ್ದೆವು, ನಮ್ಮ ಸದಸ್ಯತ್ವವನ್ನು ಕಿತ್ತುಹಾಕುವುದಕ್ಕೆ ನೀವು ಈ ತಿದ್ದುಪಡಿಯನ್ನು ತಂದಿದ್ದೀರಿ ಇದು ಸಾಧುವಲ್ಲ ಎನ್ನತಕ್ಕ ಮಟ್ಟಕ್ಕೆ ಅಲ್ಲಿ ಚರ್ಚೆಗೆಹೋಯಿತು. ಇದಕ್ಕೆ ನಾವು ಅಂಗೀಕಾರವನ್ನು ಕೊಡವುದಿಲ್ಲ, ವಿಧಾನ ಸಭೆಯ ಸದಸ್ಯರನ್ನೂ ವಿಧಾನ ಪರಿಷತ್ತಿನ ಸದಸ್ಯರನ್ನೂ ನೀವು ಏಕರೂಪದಲ್ಲಿ ಕಾಣಬೇಕೆಂದು ತಮ್ಮ ವಾದವನ್ನು ಮಂಡಿಸಿದಾಗ, ನಾನೂ ಮತ್ತು ಮಾನ್ಯ ಪ್ರಕಾಶ್‌ರವರೂ ರಾಜ್ಯಾಂಗದ ತಿದ್ದುಪಡಿಗೆ ಅನುಗುಣವಾಗಿ ತಂದಂಥ ತಿದ್ದುಪಡಿ 159. ನಾಳೆ ಅದನ್ನು ಹಿಂದಕ್ಕೆ ತೆಗೆದುಕೊಂಡಾಗ, ಯಾರಾದರೊಬ್ಬರು ಈ 159ರ ಬಗ್ಗೆ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದರೆ ಅದು ಬಿದ್ದುಹೋಗಬಹುದೆಂದು ವಿಧಾನ ಪರಿಷತ್ತಿನ ಸದಸ್ಯರಿಗೆ, ರಾಜ್ಯಸಭಾ ಸದಸ್ಯರಿಗೆ ಇರತಕ್ಕ ಅಧಿಕಾರ ಇದೆ, ಈಗ ಅವರು ಜಿಲ್ಲಾ ಪಂಚಾಯಿತಿಯಲ್ಲಿ

ಸದಸ್ಯರಾಗಿ ಮುಂದುವರೆ ಯುತ್ತಿದ್ದಾರೆ, ಅವರನ್ನು ಏತಕ್ಕೆ ತೆಗೆಯುತ್ತಿದ್ದೀರಿ ಎನ್ನತಕ್ಕ ವಾದ ಬಂದಾಗ, ಆಯಿತು, ನಾಳೆ ಯಾರಾದರೂ ನ್ಯಾಯಾಲಯಕ್ಕೆ ಹೋಗಿ ಅದು ಅಲ್ಲಿ ಬಿದ್ದುಹೋಗುವಂಥ ಪರಿಸ್ಥಿತಿ ಬಂದಾಗ ಬಹುಶ: ಅದಕ್ಕೆ ಯಾರೂ ಹೊಣೆಗಾರರಾಗುವುದಿಲ್ಲ ಎಂದು ತಿಳಿದುಬಂದಾಗ ಮಾನ್ಯ ಮಂತ್ರಿಯವರು ಅದಕ್ಕೆ ಅಧಿಕೃತವಾದ ಒಂದು ತಿದ್ದುಪಡಿಯನ್ನು ತಂದು ಅದನ್ನು ಅಂದರೆ 159ನ್ನು ಈ ವಿಧೇಯಕದಿಂದ ತೆಗೆಯಬೇಕೆಂದು ಅಲ್ಲಿ ಅವರು ತಮ್ಮ ಅಂಗೀಕಾರವನ್ನು ಕೊಟ್ಟರು. ಅದು ಇವತ್ತು ನಮ್ಮ ಮುಂದೆ ಬಂದಿದೆ. ನಾನಾದರೂ ಹೇಳುತ್ತೇನೆ. ಇದು ಸರ್ಕಾರದ ವತಿಯಿಂದ ಅಧಿಕೃತವಾಗಿ ತಂದಿರತಕ್ಕ ತಿದ್ದುಪಡಿ ಇವತ್ತು ವಿಧಾನ ಪರಿಷತ್ತಿನ ಸದಸ್ಯರು ಮತ್ತು ರಾಜ್ಯಸಭಾ ಸದಸ್ಯರಾಗಿ ಮುಂದುವರೆಯುತ್ತಿದ್ದಾರೆ. 1985ರ ಕಾನೂನಿನಲ್ಲಿ ಏನಿತ್ತು ಎಂದರೆ, ಟೀಚರ್ಸ್ ಕಾನ್‌ಸ್ಟಿಟ್ಯುಯನ್ಸಿಯಿಂದ ಗೆದ್ದು ಬಂದಿದ್ದವರು 2-3 ಜಿಲ್ಲೆಗಳಿಗೆ ಸಂಬಂಧಪಟ್ಟಂತೆ ಇದ್ದುದರಿಂದ ಅವರು ಆ 2-3 ಜಿಲ್ಲೆಗಳಿಗೂ ಹೋಗುತ್ತಿದ್ದರು. ಅದನ್ನು ಕಡಿಮೆ ಮಾಡಿ ಜಿಲ್ಲೆಯೊಳಗೆ ಎಂದು ಬಂದಾಗ ಅಂದರೆ ರೆವಿನ್ಯೂ ಡಿಸ್ಟ್ರಿಕ್ಟ್ ಎಂದು ವ್ಯಾಖ್ಯಾನವನ್ನು ನಾವು ಮಾಡಿದ್ದಾರೆ ಅದು ರಾಜ್ಯಾಂಗದ ತಿದ್ದುಪಡಿಗೆ ವಿರುದ್ಧವಾಗಿದ್ದ ಈ ತಿದ್ದುಪಡಿಯನ್ನು ತರಬೇಕೆಂದು ಒತ್ತಾಯ ಮಾಡಿದಾಗ ನಾವು ಅಧಿಕಾರವನ್ನು ಕೊಟ್ಟಿದ್ದೇವೆ. ಅದಕ್ಕನುಗುಣವಾಗಿ ನೀವು ಏತಕ್ಕೆ ಈ ತಿದ್ದುಪಡಿಯನ್ನು ತಂದಿದ್ದೀರಿ ಎಂಬ ವಾದ ಬಂದಾಗ ಮಾನ್ಯ ಮಂತ್ರಿಗಳಾದ ಪ್ರಕಾಶ್‌ರವರು ಅಧಿಕೃತ ರಾಜ್ಯಸರ್ಕಾರದ ವತಿಯಿಂದ ಅಲ್ಲಿ ಒಂದು ತಿದ್ದುಪಡಿಯನ್ನು ತಂದು 159ನ್ನು ಡಿಲಿಟ್ ಮಾಡಿ ಇವತ್ತು ಇಲ್ಲಿಗೆ ತಂದಿದ್ದೇವೆ. ಈ ಸದನ ಇದಕ್ಕೆ ತನ್ನ ಅಂಗೀಕಾರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇದು ಅಧಿಕೃತವಾಗಿ ತಂದಿರತಕ್ಕ ತಿದ್ದುಪಡಿ ಆಗಿರುವುದರಿಂದ ರಾಜ್ಯಾಂಗಕ್ಕೆನುಗುಣವಾಗಿ ಇದೇಯೇ ಅಥವಾ ವಿರುದ್ಧವಾಗದೆಯೇ ಎಂಬ ಪ್ರಶ್ನೆ ಬೇರೆ. ನಾವು ತಂದಿರತಕ್ಕ ಈ ತಿದ್ದುಪಡಿ ತಮ್ಮ ಅಂಗೀಕಾರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೈ. ರಾಮಕೃಷ್ಣ:- ಯಾವಾಗಲೇ ಆಗಲಿ ಇಂಥ ಬಿಲ್ಲುಗಳ ಬಗ್ಗೆ ಚರ್ಚೆ ಮಾಡಿ ಸಂಬಂಧಪಟ್ಟ ಮಂತ್ರಿಗಳನ್ನು ಪ್ರಶ್ನೆ ಕೇಳಿದಾಗ ಅವರು ಇನ್ವಿನ್ಸ್ ಮಾಡಬೇಕು. ಏಕೆಂದರೆ ಈ 159ನೇ ತಿದ್ದುಪಡಿ ಏನಿದೆ ಇದು ಡಿಫೆಕ್ಟೀವ್ ಆಗಿದೆ. ಇದನ್ನು ಪುನರ್ ಪರ್ಯಾಲೋಚಿಸಬೇಕೆಂದು ನಾನು ಅವತ್ತು ಸ್ಪಷ್ಟವಾಗಿ ಹೇಳಿದೆ.

ಶ್ರೀ ಎಂ.ಸಿ. ನಾಣಯ್ಯ:- ಇದು ಡಿಫೆಕ್ಟೀವ್ ಆಗಿಲ್ಲ.

ಶ್ರೀ ವೈ. ರಾಮಕೃಷ್ಣ:- ನಾನು ಹೇಳಿದ್ದು ದು ಅವರಿಗೆ ಸಂಬಂಧಪಟ್ಟಂತೆ ಮಾನ್ಯ ಅಧ್ಯಕ್ಷರೆ, ಇದಕ್ಕೆ ಇವತ್ತು ಡಿಪ್ಲೈ ಇದೆಯೇ? ತಾವು ತರಿಸಿ ನೋಡಿ. ಇಂಥ ಸಂದರ್ಬ ಇರುವಾಗ ಇದಕ್ಕೆ ಉತ್ತರವನ್ನು ಕೊಡತಕ್ಕದ್ದು ಸರ್ಕಾರದ ಕರ್ತವ್ಯ.

ತಮ್ಮ ಮೇಲ್ಮನೆಗೆ ಹೋದಾಗ ಅವರು ಹೇಳಿದ್ದುದು ನಿಮಗೆ ವೇದ್ಯವಾಯಿತು. ಆದರೆ ಇಲ್ಲಿ ನಿಮಗೆ ಹೇಳಿದಾಗ ಇದು ವೇದ್ಯವಾಗಲಿಲ್ಲ. ಇನ್ನು ಉಳಿದಿರತಕ್ಕದ್ದೆಲ್ಲಾ ಕಾನ್‌ಸಿಕ್ವೆನಷಿಯಲ್ ಅಮೆಂಡ್‌ಮೆಂಟ್ಸ್. ಅದರ ಬಗ್ಗೆ ನನ್ನ ಅಬ್ಜೆಕ್ಷನ್ ಇಲ್ಲ. ಇನ್ನು ಮುಂದಾದರೂ ಕೂಡ, ಕಾನೆಸ್ಟಿಟ್ಯೂಷನಲ್ ಲಿಟಿಗೆಲಷನ್, ಲಿಗ್ಯಾಲಿಟಿ ಇರಬಹುದು, ಪ್ರೊಸೀಜರಲ್ ಮ್ಯಾಟರ್ಸ್ ಬಗ್ಗೆ ಇರಬಹುದು, ಇವುಗಳ ಬಗ್ಗೆ ನಾವು ಏನಾದರೂ ಹೇಳಿದಾಗ ದಯವಿಟ್ಟು ಅದರ ಬಗ್ಗೆ ಸರ್ಕಾರ ಗಮನ

ಕೊಡಬೇಕು. ಇನ್ನು ಮುಂದೆ ಈ ರೀತಿ ಆಗದ ಹಾಗೆ ನೋಡಿಕೊಳ್ಳಬೇಕೆಂದು ತಿದ್ದುಪಡಿಗೆ ನಾನು ಅನುಮೋದನೆ ಕೊಡುತ್ತೇನೆ.

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ:

'' ವಿಧಾನ ಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಂಗೀಕಾರವಾದ 1996ನೇ ಸಾಲಿನ ಕರ್ನಾಟಕ ಪಂಚಾಯತ್‌ರಾಜ್ಯ (ತಿದ್ದುಪಡಿ) ವಿಧೇಯಕವನ್ನು ಪುನರ್ ಪರ್ಯಾಲೋಚಿಸುವುದು.

ಪ್ರಸ್ತಾವ ಸಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2ರಿಂದ7ರವರೆಗೆ

ಅಧ್ಯಕ್ಷರು:- ''ಖಂಡ 2 ರಿಂದ 7 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2 ರಿಂದ 7ರವರೆಗೆ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು.)

ಖಂಡ 1 ಇತ್ಯಾದಿ:

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ:

''ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಸಂಗೀಕರಿಸಲ್ಪಪಟ್ಟಿತು

(ಮೊದಲನೆಯ ಖಂಡ, ದೀರ್ಘಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ.ಸಿ.ನಾಣಯ್ಯ:- ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು (ಗ್ರಾಮೀಣಾಭಿವೃದ್ಧಿ ಸಚಿವರ ಪರವಾಗಿ):-ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿನಿಂದ ತಿದ್ದುಪಡಿಯಾಗಿ ಬಂದಿರುವ

''1996ರ ಕರ್ನಾಟಕ ಪಂಚಾಯತ್‌ರಾಜ್(ತಿದ್ದುಪಡಿ ವಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.)

ಅಧ್ಯಕ್ಷರು:- ಪ್ರಸ್ತಾವ ಏನೆಂದರೆ:

''1997ನೇ ಸಾಲಿನ ಕರ್ನಾಟಕ ಪಂಚಾಯಿತ್‌ರಾಜ್ (ತಿದ್ದುಪಡಿ)

ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

ಪ್ರಸ್ತಾವ ಅಂಗೀಕಾರಿಸಲ್ಪಟ್ಟತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ನಿಯಮ 69

ಅಲ್ಪ ಕಾಲಾವಧಿ ಚರ್ಚೆಗೆ ಉತ್ತರ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ ನಮ್ಮಲ್ಲಿ ಇನ್ನೂ 2-3 ಜನ ಮಾನ್ಯ ಸದಸ್ಯರು ಮಾತಾನಾಡಬೇಕಾಗಿದೆ. ನಾನೂ ಮತ್ತು ಮಾನ್ಯ ಯಡಿಯೂರಪ್ಪನವರು ಮಾತ್ರ ಮಾತನಾಡಿದ್ದೇವೆ. ದಯವಿಟ್ಟು ಆ 2-3 ಸದಸ್ಯ ಸದಸ್ಯರಿಗೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ: ಎ.ಬಿ.ಮಲ್ಲಕರೆಡ್ಡಿ:-(ಯಾದ್ಗೀರ್):- ಮಾನ್ಯ ಅಧ್ಯಕ್ಷರೆ, 69ನೇ ನಿಯಮದ ಅಡಿಯಲ್ಲಿ ನಾವು ಚರ್ಚೆಗೆ ತೆಗೆದುಕೊಂಡಿರುವ ಕೃಷ್ಣಾ ಮೇಲ್ದಂಡೆಯೋಜನೆಯ ವ್ಯಾಪ್ತಿಗೆ ಸಂಬಂಧಿಸಿದಂತೆ ಮಾನ್ಯ ವಿರೋಧಪಕ್ಷದ ಧುರೀಣರಾದ ಮಾನ್ಯ ಯಡಿಯೂರಪ್ಪನವರು ಹಾಗೂ ಕಾಂಗ್ರೆಸ್ ಪಕ್ಷದ ನಾಯಕರಾದ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಬಹಳ ಸುದೀರ್ಘವಾಗಿ ಮಾತಾನಾಡಿದ್ದಾರೆ. ಆದರೆ ನನ್ನ ಮತಕ್ಷೇತ್ರದಲ್ಲಿ ಈ ಅಚ್ಚುಕಟ್ಟು ಪ್ರದೇಶ ಬರುವುದರಿಂದ ಅಲ್ಲಿರತಕ್ಕ ಜನರು ಈ ಯೋಜನೆಯ ಬಗ್ಗೆ, ಈ ನೀರಾವರಿ ಆಡಳಿತ ಬಗ್ಗೆ ಏನು ಹೇಳಿಕೊಳ್ಳುತ್ತಿದ್ದಾರೆಂಬುದನ್ನು ನಾನು ಈ ಸದನದ ಗಮನಕ್ಕೆ ತರಬಯಸುತ್ತೇನೆ. 1975-76ರ ಬಚಾವತ್ ತೀರ್ಪಿನ ಪ್ರಕಾರ ನೀರಿನ ಹಂಚಿಕೆ ಏನಿದೆ ಇದೇ ಒಂದು ರೀತಿಯ ವಿಪರ್ಯಾಸ. ತಮಗೆ ಗೊತ್ತಿರುವಂತೆ ಕೃಷ್ಣಾನದಿ ನಮ್ಮ ಕರ್ನಾಟಕದಲ್ಲಿ 480 ಕಿ.ಮಿ. ದೂರ ಹರಿಯುತ್ತಿದೆ, ಆಂಧ್ರದಲ್ಲಿ ಕೇವಲ 116 ಕಿ.ಮಿ. ಮತ್ತು ಮಹಾರಾಷ್ಟ್ರದಲ್ಲಿ 360 ಕಿ.ಮಿ ದೂರ ಹರಿಯುತ್ತಿದೆ. ಆದರೆ ಈ 3 ರಾಜ್ಯಗಳಲ್ಲಿ ಹರಿಯುತ್ತಿರುವ ನದಿಯ ನೀರಿನ ಬಳಕೆಯನ್ನು ಲೆಕ್ಕಕ್ಕೆ ತೆಗೆದುಕೊಂಡರೆ, 116 ಕಿ.ಮಿ. ದೂರ ಹರಿಯುತ್ತಿರುವ ಆಂಧ್ರದಲ್ಲಿ 811 ಟಿ.ಎಂ.ಸಿ.ಎಫ್.ಟಿ. ನೀರು ಹಂಚಿಕೆಯಾಗಿದೆ. ನಮ್ಮ ಕರ್ನಾಟಕಕ್ಕೆ 734 ಟಿಎಂಸಿಎಫ್ ಮತ್ತು ಮಹಾರಾಷ್ಟ್ರಕ್ಕೆ 588 ಟಿಎಂಸಿಎಫ್‌ಟಿ ನೀರು ಹಂಚಿಕೆಯಾಗಿದೆ. ಇದಕ್ಕೆ ಕಾರಣವನ್ನು ವಿಶ್ಲೆಷಣೆ ಮಾಡಿದ್ದೇ ಆದರೆ ಬಚಾವತ್ ಯಾವ ಪ್ರಕಾರ ಇತ್ತು ರಾಜ್ಯಗಳಿಗೆ ಎಂಬುದು ಅಥವಾ ಆಗಿನ ಕಾಲದಲ್ಲಿ ಸರಿಯಾದ ವಾಸ್ತಾವಾಂಶವನ್ನು ಟ್ರಿಬ್ಯುನಲ್ ಮುಂದೆ, ನ್ಯಾಯಾಂಗದ ಮುಂದೆ ಇಡದ ಕಾರಣ ಕರ್ನಾಟಕಕ್ಕೆ ಬಹಳ ದೊಡ್ಡ ಅನ್ಯಾಯವಾಯಿತು. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಹೈದರಬಾದ್ ಕರ್ನಾಟಕದ ಕಡೆ ಒಂದು ನಾಣ್ನುಡಿ ಇದೆ.

ಯಾವನು ಎಚ್ಚೆತ್ತಿರುತ್ತಾನೆ ಅವನು ಬದುಕುತ್ತಾನೆ, ಬಾಳುತ್ತಾನೆ,